ಶ್ರೀ ಸಿ. ಬೈರೇಗೌಡ : ವ್ಯವಸಾಯದಲ್ಲಿ ಬರತಕ್ಕ ಪದಗಳಿಲ್ಲ, ಹೇಳಿಕೆಗಳಲ್ಲಿ ಖಾರಿಫ್ ರಬಿ ಎಂದು ಹೇಳುತ್ತಾರೆ. ರಬಿ, ಖಾರಿಫ್ ಎಂಬುವು ಡೆಲ್ಲಿಯಲ್ಲಿ ಬಳಸಿದ ಪದಗಳು.

ಅಧ್ಯಕ್ಷರು : ಚರ್ಚೆಗೆ ವ್ಯವಸಾಯ ಸ್ಪಂದಿಸಿರಲಿಲ್ಲ. ಮಾನ್ಯ ಸದಸ್ಯರು ವ್ಯವಸಾಯವನ್ನು ಸ್ಪಂದಿಸಿದ್ದಾರೆ.

ಶ್ರೀ ಸಿ. ಬೈರೇಗೌಡ : ಕನ್ನಡ ಪದಗಳು ಏನಿದೆ ಅವನ್ನು ನೀವೇ ತನ್ನಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಏಪ್ರಿಲ್ ಒಂದನೇ ತಾರೀಖು ಶ್ರೀ ವಾಟಾಳ್ ನಾಗರಾಜ್ ಅವರು ಏನು ವಿಷಯ ಎತ್ತಿದ್ದಾರೆ ಅದು ಒಳ್ಳೆಯ ರೀತಿಯಲ್ಲಿ ಅಂತ್ಯವಾಗಿದೆ.

ಈಗ ಚಲನಚಿತ್ರ ನಿರ್ಮಾಪಕರ ಶ್ರೀ ಸತ್ಯಜಿತ್‌ರಾಯ್ ಅವರಿಗೆ ಅಭಿನಂದನೆ.

ಮಾನ್ಯ ಸದಸ್ಯರೇ,

ಕಲ್ಕತ್ತದ ಚಿಕಿತ್ಸಾಲಯವೊಂದರಲ್ಲಿ ಸಾವಿನೊಡನೆ ಸೆಣಸಾಡುತ್ತಿರುವ ಅಪ್ರತಿಮ ಸಾಹಸಗಾರ, ಅಸಾಧಾರಣ ಪ್ರತಿಭಾಶಾಲಿ ಶ್ರೀ ಸತ್ಯಜಿತ್‌ರಾಯ್ ಅವರ ಹೆಸರನ್ನು ಕೇಳದ ಭಾರತೀಯರಾರು? ಭಾರತೀಯ ಚಲನಚಿತ್ರ ಜಗತ್ತಿಗೆ ಒಂದು ಹೊಸ ಆಯಾಮವನ್ನೇ ನೀಡಿದ ಮೇರು ಸದೃಶ ವ್ಯಕ್ತಿತ್ವದ ಶ್ರೀ ರಾಯ್ ಅಘಾದ ಕಲ್ಪನಾಶಕ್ತಿಗೆ ಮತ್ತೊಂದು ಹೆಸರು. ತನ್ನ ಕನಸೆಲ್ಲವನ್ನು ನನಸು ಮಾಡಿದ ಅಪರೂಪದ ಈ ಚಿತ್ರಬ್ರಹ್ಮನಿಗ ರಾಷ್ಟ್ರ ತನ್ನ ಅತ್ಯುನ್ನತ ಗೌರವವಾದ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿರುವುದು ಇಡೀ ರಾಷ್ಟ್ರಕ್ಕೆ ಅಭಿಮಾನದ ಸಂಗತಿ. ಇದರ ಬೆನ್ನಿಗೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ವಿಶ್ವವಿಖ್ಯಾತ ಹಾಲಿವುಡ್ ತನ್ನ ಪ್ರತಿಷ್ಠಿತ 'ಆಸ್ಕರ್' ಪ್ರಶಸ್ತಿಯನ್ನೂ ನೀಡಿರುವುದು ಭಾರತೀಯರೆಲ್ಲರ ಸಂತೋಷವನ್ನು ಇಮ್ಮಡಿ ಮುಮ್ಮಡಿಗೊಳಿಸಿದೆ. ಈ ಶುಭಸಂದರ್ಭದಲ್ಲಿ ಸತ್ಯಜಿತ್‌ರೇ ಅವರನ್ನು ಮನಃಪೂರ್ವಕವಾಗಿ ಅಭಿನಂದಿಸಿ, ಅವರ ಆರೋಗ್ಯ ಶೀಘ್ರವಾಗಿ ಸುಧಾರಿಸಿ, ಮತ್ತೆ ಅವರು ಅಂತರಾಷ್ಟ್ರೀಯ ಕಾರ್ಯರಂಗಕ್ಕೆ ಮರಳಿ ಕಾರ್ಯೋನ್ಮುಖರಾಗಿ, ರಾಷ್ಟ್ರದ ಖ್ಯಾತಿಯನ್ನು ಮತ್ತೂ ಹೆಚ್ಚಿಸುವಂತಾಗಲೆಂದು ಸದನದ ಗೌರವಾದರಗಳಿಂದ ಹಾರೈಸುತ್ತದೆ.

(ಮಾನ್ಯ ಸದಸ್ಯರೆಲ್ಲರೂ ಚಪ್ಪಾಳೆ ತಟ್ಟಿ ಶುಭ ಹಾರೈಸಿದರು)

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ : ಐದು ವರ್ಷಗಳಿಗೊಮ್ಮೆ ಅರಾಕ್‌ನ್ನು ಗುತ್ತಿಗೆ ಕೊಡುವ ಬಗ್ಗೆ

ಶ್ರೀ ಆರ್. ವಿ. ದೇಶಪಾಂಡೆ : (ಹಲಿಯಾಳ) ನಿಜವಾಗಿ ಏಪ್ರಿಲ್ ಫೂಲ್ ಆದಹಾಗೆ ಆಯಿತು. ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆ. ಅದರ ಬಗ್ಗೆ ತಾವು ನಿರ್ಣಯ ಕೊಡಬೇಕಾಗುತ್ತದೆ. ನಾನು ಕೊಠಡಿಗೆ ಬಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಏನು ಬರೀ ಕೈ-ಬಾಯಿ ಸನ್ನೆ ನಡೆಯುತ್ತಿದೆಯಲ್ಲ, ವಿಚಾರ ಏನು ಎಂದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಅದು ಗಹನವಾದ ವಿಚಾರ. ಮಾತಿನ ಜೊತೆಗೆ ಕೈ, ಬಾಯಿ, ಕಣ್ಣು ಸನ್ನೆಗಳು.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸದನದಲ್ಲಿ ಒಂದು ಪ್ರಿವಿಲೇಜ್ ಪ್ರಶ್ನೆ ಬಂದಿತ್ತು.

ಅಧ್ಯಕ್ಷರು : ನಾನು ಸದನ ಮುಗಿಯುವುದರೊಳಗೆ ಅದರ ಬಗ್ಗೆ ತೀರ್ಮಾನ ಪ್ರಕಟಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ. ಅದಕ್ಕೆ ಶ್ರೀ ಗುರುಪಾದಪ್ಪನವರು, ಶ್ರೀ ಕೌಜಲಗಿಯವರು ಮತ್ತು ಶ್ರೀ ಸಿದ್ದನಗೌಡರು ಸಹಿ ಹಾಕಿದ್ದಾರೆ. ಅದೇನೆಂದರೆ, ಈ ಸರ್ಕಾರ ಪ್ರತಿವರ್ಷ ಏನು ಅರಾಕ್ ಪರಾಜು ಹಾಕುತ್ತಿದೆ ಅದನ್ನು 5 ವರ್ಷಗಳಿಗೊಮ್ಮೆ ಗುತ್ತಿಗೆ ಕೊಡುವ ನಿರ್ಣಯ ಮಾಡಿದ್ದಾರೆಂದು ಗೊತ್ತಾಗಿದೆ.

ಅಧ್ಯಕ್ಷರು : ನೀವು ಅಡ್ಜರ್ನ್‌ಮೆಂಟ್ ಪೋಷನ್ ಎಂದು ಹೇಳಿ ಕಳುಹಿಸಿದ್ದೀರಿ. ಅದು ಹೇಗೆ ಅಡ್ಜರ್ನ್‌ಮೆಂಟ್ ಪೋಷನ್ ಆಗುತ್ತದೆ. ಈಗತಾನೇ ಬಜೆಟ್ ಚರ್ಚೆಯಾಗಿ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆಗಿ....

ಶ್ರೀ ಆರ್.ವಿ. ದೇಶಪಾಂಡೆ : ಇದು ಬಹಳ ಮುಖ್ಯವಾದ ವಿಷಯ ಇದೆ. ಕೋಟ್ಯಾಂತರ ರೂಪಾಯಿ ರೆವಿನ್ಯೂ ಸರ್ಕಾರಕ್ಕೆ ಲಾಸ್ ಆಗುತ್ತಿದೆ. ಹಾಗಾಗಿ ಇದರಲ್ಲಿ ಸಾರ್ವಜನಿಕ ಹಿತ ಮತ್ತು ರಾಜ್ಯದ ಹಿತ ಇದೆ.

ಇವತ್ತು ಮಾನ್ಯ ಅಬ್ಕಾರಿ ಸಚಿವರು ಬಂದಿದ್ದಾರೆ. ಇದರ ಬಗ್ಗೆ ಅವರು ಬೆಳಕು ಚೆಲ್ಲುವುದಕ್ಕೆ ಸಾಧ್ಯವಾಗಬಹುದು.

Mr. Speaker : What is the basis on which you are trying to raise this issue?

Sri R.V. Deshponde : I will make preliminary submission.

Mr. Speaker : Then this becomes hypothetical preposition. An adjournment motion has to be on specific decision or act or event etc. There cannot be an adjournment motion on the thinking of the Government. You are saying that ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ ಎಂದು ಹೇಳುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಹೇಳಿದ್ದೇನೆ. ನಾನು ಏನು ತಮಗೆ ಹೇಳುತ್ತಿದ್ದೇನೆ ಎಂದರೆ this is the latest incident.

Mr. Speaker : No, No.

Sri. R.V. Deshponde : Please allow me to speak.

ಪ್ರಿಲಿಮಿನರಿ ಸಬ್‌ಮಿಷನ್ ಮಾಡಿಲ್ಲ.

ಅಧ್ಯಕ್ಷರು : ಪ್ರಿಲಿಮಿನರಿ ಸಬ್‌ಮಿಷನ್‌ಗೂ ಕೂಡ.....

ಶ್ರೀ ಆರ್.ವಿ. ದೇಶಪಾಂಡೆ : ಇದು ನಿಮಗೂ ಗೊತ್ತು. ಅರಾಕ್ ಕಾಂಟ್ರಾಕ್ಟರ್‌ಗೆ ಬಡ್ಡಿ ಮನ್ನಾ ಮಾಡಲಿಕ್ಕೆ ಹೊರಟಿದ್ದಾರೆ. 5 ವರ್ಷದ ಗುತ್ತಿಗೆ ಕೊಡುವುದಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು ಅದೆಲ್ಲಾ ತೀರ್ಮಾನ ಮಾಡಿದ್ದಾರೆ. ಮಂತ್ರಿಗಳು ಎಲ್ಲವನ್ನೂ ಎಕ್ಸ್‌ಪ್ಲೈನ್ ಮಾಡಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಇಲ್ಲ ಎಂದು ಹೇಳಲಿ.

ಅಧ್ಯಕ್ಷರು : ನೀವು ಅವಕಾಶ ಕೊಟ್ಟರೆ ತಾನೆ ಅವರು ಇಲ್ಲ ಎಂದು ಹೇಳುವುದು? ನೀವು ಅವಕಾಶವನ್ನೇ ಕೊಡದಿದ್ದರೆ ಇಲ್ಲ ಎಂದು ಹೇಗೆ ಹೇಳುವುದು? ನಾನೇ ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. ಅಂಥ ಯೋಚನೆ ಇಲ್ಲ ಎಂದು. ಯಾರಾದರೂ ಐದು ವರ್ಷಕ್ಕೆ ಎಕ್ಸೈಸ್ ಕಂಟ್ರಾಕ್ಟ್ ಮಾಡಿಕೊಡುತ್ತಾರಾ?

ಶ್ರೀ ಆರ್.ವಿ. ದೇಶಪಾಂಡೆ : ಅವರ ಬಾಯಿಂದ ಹೇಳಲಿ.

ಶ್ರೀ ಧರ್ಮಸಿಂಗ್ : ಸಭಾಧ್ಯಕ್ಷರು ಕೂಡ ಹೇಳಿದ್ದಾರೆ. ಅಬ್ಕಾರಿ ಇಲಾಖೆ ಬಗ್ಗೆ ಚರ್ಚೆ ಆಗತಕ್ಕ ಕಾಲದಲ್ಲಿ ತಾವು ಇರಲಿಲ್ಲ. ಹೊರಗಡೆ ಇದ್ದೀರಿ. ಡಿಮ್ಯಾಂಡ್ ಬಂದಾಗ ಸನ್ಮಾನ್ಯ ಸದಸ್ಯರು ಕೂಡ ಇರಲಿಲ್ಲ. ಎಕ್ಸೈಜ್‌ನಿಂದ ನಮಗೆ ಏನು ರೆವಿನ್ಯೂ ಬರಬೇಕಾಗಿದೆ ಕಂಟ್ರಾಕ್ಟರ್‌ನಿಂದ ಏನು ಬರಬೇಕಾಗಿದೆ ಅದರ ಬಗ್ಗೆ ಫ್ಲಕ್ಚುಯೇಷನ್ ಏನಿದೆ ಅದರ ಬಗ್ಗೆ ಏನಾದರೂ ಕೂಡ ಲಾಂಗ್ ಟರ್ಮ್ ಪಾಲಿಸಿ ತೆಗೆದುಕೊಳ್ಳಬೇಕು ಎಂದು ಸಲಹೆ ಬಂತು. ತಾವು ಏನು ಹೇಳುತ್ತಾ ಇದ್ದೀರಿ ಅದರ ಬಗ್ಗೆ ಸಲಹೆ ಬಂದಾಗ ಸರ್ಕಾರ ಪರಿಶೀಲನೆ ಮಾಡಬಹುದು ನೋಡಬಹುದು ಎಂದು ಹೇಳಿದೆ. ಇವತ್ತು ನೇರವಾಗಿ ಸರ್ಕಾರ ನಿರ್ಣಯ ತೆಗೆದುಕೊಂಡಿದೆ ಎಂದು ಹೇಳಿದಿರಿ. ಎಕ್ಸೈಸ್ ಮಿನಿಸ್ಟರ್ ಆಗಿ ನಾನು ಹೇಳುತ್ತಿದ್ದೇನೆ ಸಭಾಧ್ಯಕ್ಷರು ಹೇಳಿದ ಹಾಗೆ ನಾವು ಯಾವುದೇ ಡಿಸಿಷನ್ ತೆಗೆದುಕೊಂಡಿಲ್ಲ. ಎಕ್ಸೈಸ್ ಕಾಂಟ್ರಾಕ್ಟರ್‌ಗೆ ರಿಯಾಯಿತಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ನಾನು ಕೂಡ ಹೇಳಿದ್ದೇನೆ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ ಇಲ್ಲಿಯವರೆಗೆ ಕರ್ನಾಟಕ ರಾಜ್ಯದಲ್ಲಿ ಯಾವ ಸಾರಾಯಿ ಗುತ್ತಿಗೆದಾರರಿಗೆ ಇಂಟರೆಸ್ಟ್ ವೇವ್ ಮಾಡಿಕೊಟ್ಟಿಲ್ಲ. ಎರಡನೆಯದು.....

ಶ್ರೀ ಆರ್.ವಿ. ದೇಶಪಾಂಡೆ : ಅದು ಚರ್ಚೆಯಾಗಿದೆ. ಸ್ಪೆಸಿಫಿಕ್ಕಾಗಿ ಹೇಳಿದ್ದೇವೆ. ಅರಾಕ್ ಆಕ್ಷನ್ ಪ್ರತಿವರ್ಷ ಮಾಡುತ್ತೀರಲ್ಲ ಅದು ಐದು ವರ್ಷಕ್ಕೊಮ್ಮೆ ಮಾಡಿ ಕೆಲವರಿಗೆ ಸಹಾಯ ಮಾಡುವುದಕ್ಕೆ ಮಾಡುತ್ತಾ ಇದ್ದೀರಿ.

ಶ್ರೀ ಧರ್ಮಸಿಂಗ್ : ಮಾಡಿಲ್ಲ ಎಂದು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರ, ದೇಶಪಾಂಡೆ ಅವರು ಮಂತ್ರಿಯಾಗಿ ಕೂಡ ಕೆಲಸ ಮಾಡಿದ್ದಾರೆ. ಇವತ್ತು ಏನಾದರೂ ಪುರಾವೆ ಇದ್ದರೆ ಸರ್ಕಾರ ನಿರ್ಣಯ ತೆಗೆದುಕೊಂಡಿದ್ದರೆ ಸದನದಲ್ಲಿ ಅದನ್ನು ಹೇಗೆ ನಿರಾಕರಣೆ ಮಾಡುವುದಕ್ಕೆ ಸಾಧ್ಯ? ಸರ್ಕಾರ ನಿರ್ಣಯ ತೆಗೆದುಕೊಂಡಿದ್ದರೆ ತೆಗೆದುಕೊಂಡಿದ್ದೇವೆ ಎಂಬ ಮಾತನ್ನು ಹೇಳಬಹುದು. ಎಷ್ಟೋ ಪರಿಶೀಲನೆ ಮಾಡುವಂಥ ರೀತಿಯಲ್ಲಿ ಸರ್ಕಾರ ಏನೇನು ನಿರ್ಣಯ ತೆಗೆದುಕೊಳ್ಳಬೇಕಾಗಿದೆ ಯಾವ ರೀತಿಯಾಗಿ ವಿಚಾರ ಮಾಡಬೇಕಾಗಿದೆ ಎಂಬ ಬಗ್ಗೆ ಸದನದಲ್ಲಿ ಕೂಡ ಸಾಕಷ್ಟು ವಿಚಾರಗಳು ಪ್ರಸ್ತಾಪವಾಗಿದೆ. ಯಾವ ಯಾವ ವಿಚಾರಗಳು ಪ್ರಸ್ತಾಪ ಮಾಡಿದಾಗ ಅದರ ಬಗ್ಗೆ ಸರ್ಕಾರ ಗಮನಹರಿಸುತ್ತದೆಂದು ಹೇಳಿದ್ದೇನೆಯೇ ಹೊರತು ಡಿಸಿಷನ್ ತೆಗೆದುಕೊಂಡಿಲ್ಲ. ತಮ್ಮ ಮನಸ್ಸಿನಲ್ಲಿ ಬಂದಿರುವ ಶಂಕೆ ಸತ್ಯಕ್ಕೆ ದೂರವಾದುದು. ಇವತ್ತಿನ ದಿವಸ ಅದರ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡಿಲ್ಲ. ಆದ್ದರಿಂದ ಈ ನಿಲುವಳಿ ಸೂಚನೆ ಮೂಲಕ ಸರ್ಕಾರದ ಮೇಲೆ ಆರೋಪ ಮಾಡುವುದಕ್ಕೆ ಆಗುವುದಿಲ್ಲ ಎಂಬ ಮಾತು ಹೇಳುತ್ತಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಶಾಸನಸಭೆ ಆದಮೇಲೆ ತೆಗೆದುಕೊಳ್ಳುತ್ತೀರಿ ಎಂದು ಹೇಳುತ್ತಾರೆ. ತೆಗೆದುಕೊಳ್ಳುವುದಿಲ್ಲ ಎಂದರೆ ಸಂತೋಷ. ಇಂಥ ನಿರ್ಣಯ ಆದರೆ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಲುಕ್ಸಾನಾಗುತ್ತದೆ. ಅದರ ಜವಾಬ್ದಾರಿ ನಿಮ್ಮ ಮೇಲೆ ಬರುತ್ತದೆಂದು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅರ್ಜಿಗಳನ್ನು ಒಪ್ಪಿಸುವುದಕ್ಕಿಂತ ಮೊದಲು ಇವತ್ತಿನ ಅಜೆಂಡಾ ಪೇಪರ್‌ನಲ್ಲಿ ಒಂದು ಸರ್ಕ್ಯುಲರ್‌ನ್ನು ಸನ್ಮಾನ್ಯ ಅಜೀಜ್ ಸೇಠ್ ಅವರು ಕಳುಹಿಸಿಕೊಟ್ಟಿದ್ದಾರೆ.

ಅಧ್ಯಕ್ಷರು : ಅಜೆಂಡಾ ಪೇಪರ್‌ನಲ್ಲಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಜೆಂಡಾ ಪೇಪರ್‌ನಲ್ಲಿ ಬಂತು. ಆದ್ದರಿಂದ ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಇವತ್ತು ಏನೇ ಬಂದಿದ್ದರೂ ಸ್ವಲ್ಪ ವಿವರವಾಗಿ ಮೂಲಕ್ಕೆ ಹೋಗಿ ನೋಡಿ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾವ

ವಿಷಯ : ಕೆಎಸ್‌ಆರ್‌ಟಿಸಿ ಬಸ್ ದರಗಳನ್ನು ಜಾಸ್ತಿ ಮಾಡುವ ಬಗ್ಗೆ ಸಾರಿಗೆ ಸಚಿವರು ಸುತ್ತೋಲೆಯನ್ನು ಕಳುಹಿಸಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯಾ : (ಕನಕಪುರ) ಇದು ಬಹಳ ಮಹತ್ವವಾಗಿರತಕ್ಕ ವಿಚಾರ. ಇದನ್ನು ನಾವು ಖಂಡನೆ ಮಾಡಬೇಕಾಗುತ್ತದೆ. ಸುಮ್ಮನೆ ಸದನ ನಡೆಯುವ ಸಂದರ್ಭದಲ್ಲಿ ಸರ್ಕಾರದವರು ಕಳುಹಿಸಿದ್ದಾರೆ ಎಂದು ಇದನ್ನು ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಇವರು ಏನು ಕಳುಹಿಸಿದ್ದಾರೆಂದರೆ

"All the Members of the Legislative Assembly and the Legislative Council regarding revision of bus fares of KSRTC."

ಎಂದು ಹೇಳಿದ್ದಾರೆ.

ಸರ್ಕಾರ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತಿದೆ, ಕೆಎಸ್‌ಆರ್‌ಟಿಸಿ ದರಗಳನ್ನು ನಾವು ಜಾಸ್ತಿ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇವರಿಗೆ ಇದನ್ನು ಅಜೆಂಡಾಗಳಲ್ಲಿ ಕಳುಹಿಸುವುದಕ್ಕೆ ಯಾರು ಅಧಿಕಾರ ಕೊಟ್ಟಿದ್ದಾರೆ? ಯಾವ ಕಾರಣಕ್ಕೆ ಏರಿಸುತ್ತಾರೆ? ಅಧಿವೇಶನ ನಡೆಯುವ ಸಂದರ್ಭದಲ್ಲಿ ನಾವು ಹಲವಾರು ಸಾರಿ ಹೇಳಿದ್ದೇನೆ ಈ ಮಂತ್ರಿಗಳು ಹಾಗೂ ಸರ್ಕಾರಕ್ಕೆ ಬಸ್ ಫೇರ್ ಡಿವಿಜನ್ ಮಾಡುವುದು ಬೇಡ ಎಂದು ಹೇಳಿದ್ದೇವೆ. ನಮ್ಮ ಸರ್ಕಾರ 1985ರಿಂದ 90ರವರೆಗೆ ಇದ್ದ ಕಾಲದಲ್ಲಿ 6 ವರ್ಷದಲ್ಲಿ ಏನು ಮಾಡಿದ್ದೇನೆ ಎನ್ನುವ ಬಗ್ಗೆ ಇವರೇ ಅಂಕಿಅಂಶವನ್ನು ಕೊಟ್ಟಿದ್ದಾರೆ. ಬಿಟಿಎಸ್ ಬಿಟ್ಟು ಕೆಎಸ್‌ಆರ್‌ಟಿಸಿ ಲಾಭ ಮಾಡಿದೆ. 1986–87ರಲ್ಲಿ ಕೇವಲ 4